ಶ್ರೀ ಪಿ. ಜಿ. ಆರ್. ಸಿಂಧ್ಯ.--ಸರ್ಕಾರದ ದೃಷ್ಟಿಯಿಂದಲೂ ಹಾಗೂ ನನ್ನ ಅಭಿಪ್ರಾಯದ ಪ್ರಕಾರ ಈ ರಸ್ತೆ ಸಾರಿಗೆ ನಿಗಮವನ್ನು ೪ ವಿಭಾಗಗಳನ್ನಾಗಿ ಮಾಡುವುದು ಸೂಕ್ತವಾಗಿದೆ. ಆದರೆ ಈ ವರ್ಷವೇ ಇದನ್ನು ಮಾಡಬೇಕೆಂದು ಕಷ್ಟವಾಗುತ್ತದೆ. ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ನಂತರ ಈ ವರ್ಷವೇ ಬಿ.ಟಿ.ಎಸ್.ನ್ನು ಕೆ.ಎಸ್.ಆರ್.ಟಿ.ಸಿ.ಯಿಂದ ವಿಂಗಡಿಸಿ ಮಾಡಬೇಕು ಎನ್ನುವ ಅಭಿಪ್ರಾಯ ಸರ್ಕಾರದ ಪರಿಶೀಲನೆಯಲ್ಲಿದೆ.

ಅಧ್ಯಕ್ಷರು.— ಶ್ರೀ ಕೆ. ಹೆಚ್. ಪಾಟೀಲರ ಪ್ರಶ್ನೆಯನ್ನು ಕ್ಯಾರಿ ಓವರ್ ಮಾಡಲಾಗಿದೆ.

ರೋಣ ತಾಲ್ಲೂಕಿನ ಸೂಡಿ ಹಾಗೂ ನಿಡಗುಂದಿ ಗ್ರಾಮಗಳಲ್ಲಿ ಬಸ್ ನಿಲ್ದಾಣ ನಿರ್ಮಿಸುವ ಬಗ್ಗೆ

೧೯೩೧. ಶ್ರೀ ಜ್ಞಾನದೇವ ದೊಡ್ಡಮೇಟಿ, (ರೋಣ). --ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೇ?

ಅ) ರೋಣ ತಾಲ್ಲೂಕಿನ ಸೂಡಿ ಹಾಗೂ ನಿಡಗುಂದಿ ಗ್ರಾಮಗಳಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆಯೇ?

ಆ) ಹಾಗಿದ್ದಲ್ಲಿ, ಸೂಡಿ ಹಾಗೂ ನಿಡಗುಂದಿಗಳಲ್ಲಿ ಬಸ್ ನಿಲ್ದಾಣದ ನಿರ್ಮಾಣ ಕಾರ್ಯ ಯಾವಾಗಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯ ಸಚಿವರು,)

ಅ) ಹೌದು.

ಆ) ಸೂಡಿ ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಾಣ ಕಾರ್ಯವನ್ನು ೧೯೮೬-೮೭ನೇ ಸಾಲಿನ ಪರಿಷ್ಕೃತ ಆಯವ್ಯಯ ಪಟ್ಟಿಯಲ್ಲಿ ಸೇರಿಸಲು ಕ್ರಮ ಕೈಗೊಳ್ಳಲಾಗುವುದು. ನಿಡಗುಂದಿಯಲ್ಲಿ ದೊಡ್ಡ ನಿವೇಶನವನ್ನು ವಶಪಡಿಸಿಕೊಂಡ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜಿ. ಎಸ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ಸೂಡಿ ಮತ್ತು ನಿಡುಗುಂದಿ ಗ್ರಾಮಗಳಲ್ಲಿ ಬಸ್ ಸ್ಟಾಂಡ್ ಕಟ್ಟಿಸುವ ಬಗ್ಗೆ ಹಿಂದಿನ ಮಾನ್ಯ ಸಚಿವರಾದ ಶ್ರೀ ಎಂ. ಪಿ. ಪ್ರಕಾಶ್‌ರವರು ೫-೧೦-೮೪ ರಂದೇ ಮುಂಜೂರಾತಿಯನ್ನು ಕೊಟ್ಟಿದ್ದರು. ಆದರೆ ಇದುವರೆಗೂ ಇದನ್ನು ಆಯವ್ಯಯ ಪಟ್ಟಿಯಲ್ಲಿ ಸೇರಿಸಿಲ್ಲ. ಮಾನ್ಯ ಸಚಿವರು ಇದನ್ನು ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ ಕೊಟ್ಟಿದ್ದರು. ಆದುದರಿಂದ ಮುಂದಿನ ವರ್ಷದ ಆಯವ್ಯಯದ ಪಟ್ಟಿಯಲ್ಲಾದರೂ ಈ ಕೆಲಸವನ್ನು ಸೇರಿಸುವುದಾಗಿ ವಚನವನ್ನು ಸೇರಿಸಿಕೊಂಡು ಇದನ್ನು ಆದಷ್ಟು ತ್ವರಿತವಾಗಿ ಮುಗಿಸುತ್ತಾರೆಯೇ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರು ಹೇಳಿದ ವಿಷಯದ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಕೆ.ಐ.ಎ.ಡಿ.ಬಿ. ನಲ್ಲಿ ಸಿಬ್ಬಂದಿಯ ಸಂಖ್ಯೆ ಕುರಿತು.

೧೯೮೬. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಪ್ರದೇಶದ ಕೈಗಾರಿಕಾ ಅಭಿವೃದ್ಧಿ ಮಂಡಳಿಯಲ್ಲಿ ಎ. ಬಿ. ಸಿ. ಡಿ. ವರ್ಗದ ಸಿಬ್ಬಂದಿಯ ಸಂಖ್ಯೆ ಎಷ್ಟು ?

ಆ) ಈ ಸಿಬ್ಬಂದಿಯಲ್ಲಿ ಅನುಸೂಚಿತ ವರ್ಗ ಹಾಗೂ ಇತರೆ ವರ್ಗಕ್ಕೆ ಸೇರಿರುವ ಸಂಖ್ಯೆ ಎಷ್ಟು ?

ಇ) ಸರ್ಕಾರಿ ನೇಮಕಾತಿ ಆದೇಶದ ಪ್ರಕಾರ ಇವರ ನೇಮಕಾತಿಯಾಗಿದೆಯೇ ?

ಈ) ಹಾಗಿಲ್ಲದಿದ್ದಲ್ಲಿ, ಆ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೀಲ್(ಭಾರಿ ಮಂತ್ರಿ ಮಧ್ಯಮ ಕೈಗಾರಿಕಾ ಸಚಿವರು.).—

ಅ) ೨೧೦
ಎ— ೨
ಬಿ— ೧೧
ಸಿ—೧೦೪ ಮತ್ತು
ಡಿ— ೮೩

ಆ) ಹರಿಜನರು : ೧೭
ಗಿರಿಜನರು : ೩
ಇತರರು : ೧೯೦

ಇ) ನೇಮಕಾತಿಯನ್ನು ಸರ್ಕಾರದಿಂದ ೧೯೮೪ರಲ್ಲಿ ಒಪ್ಪಿಗೆ ಪಡೆದಿರುವಂತಹ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಮಾಡಲಾಗುತ್ತದೆ.

ಈ) ಉದ್ಭವಿಸುವುದಿಲ್ಲ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿ ಯವರು ಮಾನ್ಯ ಸಚಿವರಿಗೆ ಸತ್ಯಕ್ಕೆ ದೂರವಾದ ಮಾಹಿತಿಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ನಾನು ಸರಿಯಾದ ಮಾಹಿತಿಯನ್ನು ಈಗ ಕೊಡಬೇಕಾಗಿದೆ. ಇಲ್ಲಿ ಎ.ವರ್ಗಕ್ಕೆ ೨, ಬಿ.ವರ್ಗಕ್ಕೆ ೨೧, ಸಿ.ವರ್ಗ ಗಳಿಗೆ ೧೦೪, ಡಿ. ವರ್ಗಕ್ಕೆ ೮೩, ಹರಿಜನರಿಗೆ ೧೭, ಮತ್ತು ಗಿರಿಜನರಿಗೆ ೩ ಹಾಗೂ ಇತರೆ ೧೯೦ ಹುದ್ದೆ ಗಳನ್ನು ಕೊಟ್ಟಿರುವುದಾಗಿ ತಿಳಿಸಿದ್ದಾರೆ ಈ ೧೯೦ ಹುದ್ದೆಗಳಲ್ಲಿ ಬಿ. ಸಿ ಎಂ. ಮತ್ತು ಬಿ.ಸಿ.ಟಿ. ಸೇರಿಸಿ ಒಂದೇ ವರ್ಗವೆಂದು ಮಾಡಿದ್ದಾರೆ. ಮತ್ತು ಬಿ. ಸಿ. ಎಂ. ಹಾಗೂ ಬಿ. ಸಿ. ಟಿ. ಯನ್ನು ಎರಡು ಸೇರಿಸಿ ಒಂದೇ ವರ್ಗಕ್ಕೆ ಅಪಾಯಿಂಟ್‌ಮೆಂಟ್ ಮಾಡಿದ್ದಾರೆ. ಇದು ಸರಿಯಲ್ಲ. ಮಾನ್ಯ ಸಚಿವರು ಇದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ರೀತಿ ನಾವು ಸತ್ಯಕ್ಕೆ ದೂರವಾದ ವರದಿಯನ್ನು ಕೊಟ್ಟಿಲ್ಲ. ಒಂದು ಮಾತನ್ನು ಮಾತ್ರ ನಾನು ಒಪ್ಪುತ್ತೇನೆ. ೧೯೮೪ ರಿಂದ ಈ ನಿಗಮದಲ್ಲಿ ಕೇಡರ್ ಅಂಡ್ ರೆಕ್ರೂಟ್‌ಮೆಂಟನ್ನು (ರೂಲ್ಸ್) ಜಾರಿಗೆ ತಂದಿದ್ದಾರೆ. ಅಲ್ಲಿಂದ ಎಲ್ಲಾ ಹುದ್ದೆಗಳು ರೋಸ್ಟರ್ ಪ್ರಕಾರ ಭರ್ತಿಯಾಗುತ್ತಿವೆ. ಅದಕ್ಕೂ ಮುಂಚೆ ರೋಸ್ಟರ್ ಪದ್ಧತಿ ಯನ್ನು ಫಾಲೋ ಮಾಡಿಲ್ಲ. ಈಗ ಅಲ್ಲಿ ಏನು ಬ್ಯಾಕ್‌ಲಾಗ್ ಇದೆ, ಅದನ್ನು ಆದಷ್ಟು ಕೂಡಲೇ ಸರಿಪಡಿಸುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸಲು ಇಚ್ಛಿಸುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಬಿ.ಸಿ.ಎಂ ; ಮತ್ತು ಬಿ.ಸಿ.ಟಿ. ಎಂದು ಎರಡು ವರ್ಗಕ್ಕೆ ನೀವು ಪ್ರಾತಿನಿಧ್ಯ ಕೊಡಬೇಕಾಗಿದ್ದರೂ ಕೂಡ ಕೇವಲ ಒಂದು ವರ್ಗಕ್ಕೆ ಮಾತ್ರ ಕೊಟ್ಟಿದ್ದೀರಿ. ಮುಂದಿನಸಾರಿ ಇದನ್ನು ಕಡಿಮೆ ಮಾಡಿ ಯಾವ ವರ್ಗಕ್ಕೆ ಪ್ರಾತಿನಿಧ್ಯ ಕೊಟ್ಟಿಲ್ಲ ಅದಕ್ಕೆ ಕೊಡುತ್ತೀರಾ? ಅನಿರತಕ್ಕೆ ಬ್ಯಾಕ್‌ಲಾಗ್‌ನ್ನು ಸರಿಪಡಿಸುತ್ತೀರಾ ?

ಶ್ರೀ ಆರ್. ವಿ ದೇಶಪಾಂಡೆ.—ಯಾವ ವರ್ಗದವರಿಗೆ ಪ್ರಾತಿನಿಧ್ಯ ಸಿಕ್ಕಬೇಕಾಗಿತ್ತೋ ಅದು ಸಿಕ್ಕಿಲ್ಲ, ಇದನ್ನು ನಾನು ಒಪ್ಪುತ್ತೇನೆ. ಇನ್ನುಮುಂದೆ ನೇಮಕಾತಿಯನ್ನು ಮಾಡುವಾಗ ಯಾವ ಯಾವ ವರ್ಗದವರಿಗೆ ಎಷ್ಟೆಷ್ಟು ಪ್ರಾತಿನಿಧ್ಯ ಕೊಡಬೇಕೋ ಅದರ ಪ್ರಕಾರ ಕೊಡುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಹಿಂದೆ ಕೇಡರ್ ಅಂಡ್ ರಿಕ್ರೂಟ್ ಮೆಂಟ್ ರೂಲ್ಸ್ ಇರಲಿಲ್ಲ. ನಾವು ಬಂದಮೇಲೆ ಎಂದರೆ ೧೯೮೪ ರಿಂದ ಇದನ್ನು ಜಾರಿಯಲ್ಲಿ ತಂದಿದ್ದೇವೆ ಈಗ ಏನು ಒಂದು ವರ್ಗಕ್ಕೆ ಪ್ರಾತಿನಿಧ್ಯ ಸಿಕ್ಕಿಲ್ಲ ಅದನ್ನು ಮುಂದಿನಸಾರಿ ಸರಿಪಡಿಸುತ್ತೇನೆಂದು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ ನಾನಾದರೂ ಕೇಳುತ್ತೇನೆ, ಈಗ ಏನು ಬ್ಯಾಕ್‌ಲಾಗ್ ಆಗಿದೆ, ಎಲ್ಲೆಲ್ಲಿ ಖಾಲಿ ಹುದ್ದೆಗಳು ಇವೆ ಅವುಗಳನ್ನು ಭರ್ತಿ ಮಾಡುವ ಸಲುವಾಗಿ ಒಂದು ಸ್ಪೆಷಲ್ ರಿಕ್ರೂಟ್‌ಮೆಂಟ್ ಕಮಿಟಿಯನ್ನು ಮಾಡುತ್ತೀರಾ ?

[illegible]

ಶ್ರೀ ಆರ್. ವಿ. ದೇಶಪಾಂಡೆ.—ರಿಕ್ರೂಟ್‌ಮೆಂಟ್ ಕಮಿಟಿ ಇರಬೇಕು, ಸ್ಪೆಷಲ್ ರಿಕ್ರೂಟ್‌ಮೆಂಟ್ ಕಮಿಟಿ ಇರಬೇಕೆಂದು ತಾವು ಏನು ವಾದವನ್ನು ಮಂಡಿಸುತ್ತಿದ್ದೀರಿ ಅದು ಸರಿಯಲ್ಲ, ಏಕೆಂದರೆ ಯಾವುದೋ ಒಂದು ಕಾರ್ಪೋರೇಷನ್‌ನಲ್ಲಿ ಒಂದುಸಾರಿ ರಿಕ್ರೂಟ್‌ಮೆಂಟ್ ಮಾಡಬೇಕಾದರೆ ಅದಕ್ಕೆ ಒಂದು ಸಮಿತಿಯನ್ನು ಮಾಡುವುದಕ್ಕಾಗುವುದಿಲ್ಲ ಆದರೆ ಬ್ಯಾಕ್‌ಲಾಗ್ ವಿಚಾರದಲ್ಲಿ ಏನು ತಾವು ಪ್ರಸ್ತಾಪಮಾಡಿದ್ದೀರಿ ಅದನ್ನು ಸರಿಪಡಿಸಲು ಪ್ರಯತ್ನ ಮಾಡುತ್ತೇನೆ.

ಮಂಡಲಿ ಮತ್ತು ನಿಗಮಗಳಿಗೆ ಅಧ್ಯಕ್ಷರನ್ನು ನೇಮಿಸುವ ಕುರಿತು

೬೦೨. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ) —ಮಾನ್ಯ ಸಣ್ಣ ಕೈಗಾರಿಕೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ನಿಗಮ ಮತ್ತು ಮಂಡಲಿಗಳ ಸಂಖ್ಯೆ ?

ಆ) ೧೯೮೫-೮೬ರಲ್ಲಿ ನಿಗಮ ಮತ್ತು ಮಂಡಲಿಗಳಿಗೆ ನೇಮಕಗೊಂಡ ಅಧ್ಯಕ್ಷರ ಸಂಖ್ಯೆ ?

ಇ) ಅಧ್ಯಕ್ಷರಾಗಿ ನೇಮಕಗೊಂಡಿರುವವರಲ್ಲಿ ಪರಿಶಿಷ್ಟ ಜಾತಿಯಲ್ಲಿ ನೇಮಕಗೊಂಡಿರುವರ ಹೆಸರು ?

ಈ) ಸದರಿ ಮಂಡಲಿ-ನಿಗಮದಲ್ಲಿ ಸದಸ್ಯರಾಗಿ ನೇಮಕಗೊಂಡಿರುವವರ ಹೆಸರು ?

ಶ್ರೀ ಆರ್. ವಿ. ದೇಶಪಾಂಡೆ (ಸಣ್ಣ ಕೈಗಾರಿಕೆಗಳ ರಾಜ್ಯ ಸಚಿವರು).—

ಅ) ರಾಜ್ಯದಲ್ಲಿರುವ ಮಂಡಲಿ-ನಿಗಮಗಳ ಸಂಖ್ಯೆ ೧೨೬.

ಆ) ೧೯೮೫-೮೬ನೇ ಸಾಲಿನಲ್ಲಿ ನಿಗಮ ಮತ್ತು ಮಂಡಳಿಗಳಿಗೆ ನೇಮಕಗೊಂಡ ಅಧ್ಯಕ್ಷರ ಸಂಖ್ಯೆ-೩೨.

ಇ) ಪರಿಶಿಷ್ಟ ಜಾತಿಯಲ್ಲಿ ನೇಮಕಗೊಂಡಿರುವ ಅಧ್ಯಕ್ಷರ ಹೆಸರನ್ನು ಅನುಬಂಧ-೧ ರಲ್ಲಿ ಕೊಡಲಾಗಿದೆ.

ಈ) ಸದರಿ ಮಂಡಲಿ-ನಿಗಮಗಳಲ್ಲಿ ಸದಸ್ಯರಾಗಿ ನೇಮಕಗೊಂಡಿರುವವರ ಹೆಸರನ್ನು ಅನುಬಂಧ-೧ರಲ್ಲಿ ಕೊಡಲಾಗಿದೆ.

ANNEXURE-I

LIST OF CHAIRMAN WHO BELONG TO SCHEDULED CASTE

1 Sri Somu
2 Sri Rayannavar
3 Sri M.G. Sathyanarayana

BOARDS OF DIRECTORS OF 32 CORPORATIONS
KHADHI & VILLAGE INDUSTRIES BOARD

1 P. Gopal
2 B. Narayana Reddy
3 B.R. Patil
4 K. Veerana Gowda
5 Chandrakantha Patil
6 Bapu Rao S. Kulkarni
7 Abdul Mohamed Gayak
8 B.R. Neelakantappa